**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 1394 /2021**

**ಪ್ರಾಸಾಃ- 17 ಚಾಸಾಃ- 28**

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ್ ಕುಮಾರ್ ಹೆಚ್.ಬಿ |
| ತಂದೆಯ ಹೆಸರು | : | ಭೈರಪ್ಪ |
| ವಯಸ್ಸು | : | 54 ವರ್ಷ |
| ವೃತ್ತಿ | : | ಎ ಸಿ ಪಿ, ಕೆ ಆರ್ ಉಪವಿಭಾಗ, ಮೈಸೂರು ನಗರ |
| ವಾಸಸ್ಥಳ | : | ಮೈಸೂರು |
| ಸಾಕ್ಷಿಯ ಹೆಸರು | : | ರಮೇಶ್ ಕುಮಾರ್ ಹೆಚ್.ಬಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 30.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ;04.09.2020 ರಿಂದ 03.07.2022 ರವರೆಗೆ ಬಳ್ಳಾರಿ ನಗರ ಉಪ ವಿಭಾಗದ ಡಿಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ;13.09.2021 ರಂದು ಎಸ್‌ಪಿ, ಬಳ್ಳಾರಿ ರವರ ಆದೇಶದಂತೆ ಪ್ರಕರಣದ ತನಿಖೆಯನ್ನು **ಸಿಡಬ್ಲ್ಯೂ-27 ಶ್ರೀ ಹಾಲೇಶ್** ರವರಿಂದ ಪಡೆದು ಪರಿಶೀಲಸಿರುತ್ತೇನೆ. ಸದರಿ ಆದೇಶವನ್ನು ನಿಪಿ-24 ಎಂದು ಗುರುತಿಸಲಾಯಿತು.

ಅದೇ ದಿನ ತನಿಖೆಯನ್ನು ಮುಂದುವರಿಸಿ ಘಟನಾ ಸ್ಥಳವಾದ ಬಳ್ಳಾರಿ ನಗರ, ಗಾಂಧಿನಗರ ಕೆಹೆಚ್‌ಬಿ ಕಾಲೋನಿಯ ಬನ್ನಿಕಟ್ಟೆ ಪಾರ್ಕ್ ಮುಂದುಗಡೆ ಹಾದುಹೋಗಿರುವ ಸಿಮೆಂಟ್ ರಸ್ತೆಯ ಮೇಲೆ ಕೃತ್ಯ ನಡೆದ ಸ್ಥಳ ಮಹಜರು ಕ್ರಮ ಜರುಗಿಸುವ ಸಲುವಾಗಿ ಪಂಚರಾದ **ಸಿಡಬ್ಲ್ಯೂ-2** ಶ್ರೀ ಮಂಜುನಾಥ್ ಬಿನ್ ರಂಗಣ್ಣ, ಎಸ್.ಎನ್. ಪೇಟೆ, ಬಳ್ಳಾರಿ **ಮತ್ತು ಸಿಡಬ್ಲ್ಯೂ-3** ಶ್ರೀ ಭೀಮೇಶ್ ಬಿನ್ ಉದಯ್, ಸಿದ್ಧಾರ್ಥ ಕಾಲೋನಿ, ಗಾಂಧಿನಗರ, ಬಳ್ಳಾರಿ ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸದರಿಯವರ ಸಮಕ್ಷಮ **ಸಿಡಬ್ಲ್ಯೂ-1** ರವರು ತೋರಿಸಿದ ಸ್ಥಳದಲ್ಲಿ ಸಂಜೆ 4-30 ಗಂಟೆಯಿಂದ 6-00 ಗಂಟೆಯವರೆಗೆ ನಿಪಿ-2 ರಂತೆ ಸ್ಥ ಮಹಜರು ಕ್ರಮ ಜರುಗಿಸಿರುತ್ತೇನೆ. ನಿಪಿ-2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಕಚ್ಚಾ ನಕಾಶೆ ನಿಪಿ-25 ರಂತೆ ತಯಾರಿಸಲಾಯಿತು ಮತ್ತು ನಿಪಿ-3 ಮತ್ತು 4 ರಂತೆ ಫೋಟೊ ತೆಗೆಯಲಾಯಿತು.ಸದರಿ ಪಂಚನಾಮೆಯ ಪ್ರಕ್ರಿಯೆಯನ್ನು ನಿಪಿ-5 ಸಿಡಿಯಲ್ಲಿರುವಂತೆ ವೀಡಿಯೋ ಮಾಡಿಕೊಂಡಿದ್ದೆ. ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ವೀಡಿಯೊ ಮಾಡಿದ ಸಿಬ್ಬಂದಿ ಪಿಸಿ-65 ರವರಿಂದ ಕಲಂ 65ಬಿ ಪ್ರಮಾಣ ಪತ್ರವನ್ನು ನಿಪಿ-21 ರಂತೆ ಪಡೆದುಕೊಂಡಿದ್ದೆ. ನಿಪಿ21 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ

ಪ್ರ.ವ.ವರದಿಯನ್ನು ಸಲ್ಲಿಸಿದ ಹೆಚ್‌ಸಿ-308 ಶಂಕರಪ್ಪ ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ;14.09.2021 ರಂದು 1ನೇ ಆರೋಪಿ ಅಬ್ದುಲ್ @ ಅಪ್ಪಿ ಮತ್ತು 2ನೇ ಆರೋಪಿ ಗಸ್ಸಿ ಮಹಮದ್ ರವರನ್ನು ಸಿಬ್ಬಂದಿಗಳಾದ ಪಿಸಿ-32 ಮತ್ತು ಪಿಸಿ-72 ರವರು ಬೆಳಗ್ಗೆ 10-00 ಗಂಟೆಗೆ ಕೆಇಬಿ ಸರ್ಕಲ್ ಹತ್ತಿರ ವಶಕ್ಕೆ ಪಡೆದು ನನ್ನ ಮುಂದೆ ಟಾಟಾ ಏಸ್ ವಾಹನದೊಂದಿಗೆ ಹಾಜರುಪಡಿಸಿರುತ್ತಾರೆ. ನಂತರ ಆರೋಪಿತರನ್ನು ವಿಚಾರಣೆ ಮಾಡಿ ದಸ್ತಗಿರಿ ಕ್ರಮ ಅನುಸರಿಸಲಾಯಿತು. ಸದರಿಯವರ ಸ್ವ-ಇಚ್ಛಾ ಹೇಳಿಕೆಗಳನ್ನು ಪಡೆದಿದ್ದು, 1ನೇ ಆರೋಪಿತನ ಸ್ವ-ಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಟಾಟಾ ಏಸ್ ವಾಹನವನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ 2 ಕಟ್ಟಿಗೆಗಳನ್ನು ಟಾಟಾ ಏಸ್ ವಾಹನದ ಮೇಲೆ ಇಟ್ಟಿದ್ದು, ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ. **ಸದರಿ ಸ್ವಖುಷಿ ಹೇಳಿಕೆಯ ಭಾಗವನ್ನು ನಿಪಿ-26 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಮತ್ತು 1 ನೇ ಆರೋಪಿಯ ಸಹಿಯನ್ನು ನಿಪಿ-26(ಬಿ) ಎಂದು ಗುರುತಿಸಲಾಯಿತು.**

ಅದೇ ದಿನ ಜಪ್ತು ಪಂಚನಾಮೆ ಜರುಗಿಸುವ ಸಲುವಾಗಿ ಪಂಚ ಸಾಕ್ಷಿದಾರರಾಗಲು ಇಬ್ಬರು ಸಿಬ್ಬಂದಿಗಳನ್ನು ಕಳುಹಿಸಿಕೊಡುವಂತೆ ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ ರವರಿಗೆ ಪತ್ರ ವ್ಯವಹಾರ **ಮಾಡಿದ್ದೆ**. ಸದರಿಯವರು ಸಿಡಬ್ಲ್ಯೂ-4 ಶ್ರೀ ಅಯ್ಯಪ್ಪ ಮತ್ತು ಸಿಡಬ್ಲ್ಯೂ-5 ಶ್ರೀ ಶರಣಬಸಪ್ಪ ರವರನ್ನು ನೇಮಕ ಮಾಡಿ ವರದಿಯೊಂದಿಗೆ ಕಳುಹಿಸಿರುತ್ತಾರೆ. **ಸದರಿ ಪತ್ರವನ್ನು ನಿಪಿ-27 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನುನಿಪಿ-27(ಎ) ಎಂದು ಗುರುತಿಸಲಾಯಿತು. ಸದರಿಯವರು ನೀಡಿದ ನೇಮಕಾತಿ ಆದೇಶವನ್ನು ನಿಪಿ-28 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.**

ಆರೋಪಿತರ ಸ್ವ-ಇಚ್ಛಾ ಹೇಳಿಕೆಯಂತೆ ಗಾಂಧಿನಗರ ಪೋಲೀಸ್ ಠಾಣಾ ಆವರಣ, ಡಿವೈಎಸ್‌ಪಿ ಕಛೇರಿ ಮುಂಭಾಗ ಸಿಡಬ್ಲ್ಯೂ-4 ಮತ್ತು ಸಿಡಬ್ಲ್ಯೂ-5 ರವರ ಸಮಕ್ಷಮ **ಆರೋಪಿತರು** 1] ಹಿಡಿಗಾತ್ರದ ಅಂದಾಜು 2 1/2 ಅಡಿ ಉದ್ದದ ಒಂದು ಕಟ್ಟಿಗೆ, ಮತ್ತು 2] ಹಿಡಿ ಗಾತ್ರದ ಅಂದಾಜು 3 ಅಡಿ ಉದ್ದದ ಒಂದು ಕಟ್ಟಿಗೆ ಹಾಗೂ ಬಾದಾಮಿ ಬಣ್ಣದ ಟಾಟಾ ಏಸ್ ವಾಹನ ಸಂ. ಕೆಎ-34/ಎ-2341 ನ್ನು **ಹಾಜರುಪಡಿಸಿದ್ದು ಅವುಗಳನ್ನು ನಿಪಿ-10 ರಂತೆ ಪಂಚನಾಮೆಯನ್ನು ಮಾಡಿ** ಅಮಾನತ್ತುಪಡಿಸಿಕೊಂಡು ಮಾಲುಪಟ್ಟಿ ಸಂ. 60/2021 ರಲ್ಲಿ ನಮೂದಿಸಿ ಘನ ನ್ಯಾಯಾಲಯದಲ್ಲಿ ನಿವೇದಿಸಿಕೊಳ್ಳಲಾಯಿತು.**ನಿಪಿ-10 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಸಹಿಯನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯದಲ್ಲಿ ನಿಪಿ-6 ಮತ್ತು 7 ರಂತೆ** ಫೋಟೋ **ತೆಗೆಸಲಾಯಿತು**. ನಂತರ ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. **ಸಾಕ್ಷಿಯು ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿಕೊಂಡ ಎರಡು ಕಟ್ಟಿಗೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.**

ದಿನಾಂಕ;14.09.2021 ರಂದು ಸಿಡಬ್ಲ್ಯೂ-1 ರವರನ್ನು ವಿಚಾರಣೆ ಮಾಡಿ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಸಿಡಬ್ಲ್ಯೂ-6 ಶ್ರೀ ಮಾರಣ್ಣ, ಸಿಡಬ್ಲ್ಯೂ-7 ಶ್ರೀ ಕೌಶಿಕ್, ಸಿಡಬ್ಲ್ಯೂ-8 ಶ್ರೀ ಶಶಿಕುಮಾರ್, ಸಿಡಬ್ಲ್ಯೂ-9 ಶ್ರೀ ರೋಹಿತ್‌ಕುಮಾರ್,

ಸಿಡಬ್ಲ್ಯೂ-10 ಶ್ರೀ ರಮೇಶ್, ಸಿಡಬ್ಲ್ಯೂ-11 ಶ್ರೀ ಸಂತೋಷ್ ಮತ್ತು ಸಿಡಬ್ಲ್ಯೂ-12 ಶ್ರೀ ಉಮೇಶ್ ರವರನ್ನು ವಿಚಾರಣೆ ಮಾಡಿ ಸದರಿಯವರ ಹೇಳಿಕೆಗಳನ್ನು ಪಡೆದಿರುತ್ತೇನೆ. **ಚಾಸಾ** 7 **ನಿಪಿ**-8 **ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.** ಸಾಕ್ಷಿದಾರರ ಹೇಳಿಕೆಗಳನ್ನು ವೀಡಿಯೊ ಮಾಡಿದ **ಸಿಡಬ್ಲ್ಯೂ-23 ಶ್ರೀ ನಾಗರಾಜ್, ಸಿಪಿಸಿ-1050** ರವರಿಂದ 65 ಬಿ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5, 9 ಮತ್ತು 22 ವೀಡಿಯೋ ಸಿಡಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಪಂಚನಾಮೆ ಸಮಯದಲ್ಲಿ ಮತ್ತು ಸಾಕ್ಷಿದಾರರ ಹೇಳಿಕೆ ಪಡೆಯುವ ಸಮಯದಲ್ಲಿ ಮಾಡಿಕೊಳ್ಳಲಾಗಿತ್ತು.

ದಿನಾಂಕ:15.09.2021 ರಂದು ಆರೋಪಿ-3 ಚಿದಾನಂದ @ ಸಿದ್ದ ಮತ್ತು ಎ-4 ಗುಡದರ್ ವೀರೇಶ್ ರವರನ್ನು ಪತ್ತೆಮಾಡಿ ಕರೆತಂದು ಹಾಜರುಪಡಿಸುವಂತೆ ಹೆಚ್‌ಸಿ-28 ಸಿದ್ದಪ್ಪ ಮತ್ತು ಪಿಸಿ-342 ರಾಮಲಿಂಗ ರವರಿಗೆ ಜ್ಞಾಪನ ನೀಡಿದ್ದು, ಸದರಿಯವರು ವರದಿಯನ್ನು ಸಲ್ಲಿಕೊಂಡಿದ್ದು, ಆರೋಪಿತರು ತಲೆಮರೆಸಿಕೊಂಡಿರುವುದಾಗಿ ನಮೂದಿಸಿರುತ್ತಾರೆ.

ದಿನಾಂಕ:18.09.2021 ರಂದು ಟಾಟಾ ಏಸ್ ವಾಹನ ಹಾಲಿ ಮಾಲೀಕ **ಸಿಡಬ್ಲ್ಯೂ-13** ಯಲ್ಲಪ್ಪ ಬಿನ್ ಎರ್ರಿಬಸಪ್ಪ ರವರನ್ನು ಬರಮಾಡಿಕೊಂಡು ಸದರಿಯವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಲಾಯಿತು. ಟಾಟಾ ಏಸ್ ವಾಹನ ಮೂಲ ಮಾಲೀಕ **ಸಿಡಬ್ಲ್ಯೂ-14** ಶ್ರೀ ಸೆಕ್ಷಾವಲಿ ಬಿನ್ ನನ್ನೇಸಾಬ್ ರವರನ್ನು ಬರಮಾಡಿಕೊಂಡು ಸದರಿಯವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. **ಚಾಸಾ** 13 **ರವರು ನಿಪಿ**-15 **ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.**

ದಿನಾಂಕ;25.09.2021 ರಂದು ಆರೋಪಿ-3 ಚಿದಾನಂದ @ ಸಿದ್ದ ಮತ್ತು ಎ-4 ಗುಡದರ್ ವೀರೇಶ್ ರವರನ್ನು ಪತ್ತೆಮಾಡಿ ಕರೆತಂದು ಹಾಜರುಪಡಿಸುವಂತೆ ಹೆಚ್‌ಸಿ-28 ಸಿದ್ದಪ್ಪ ಮತ್ತು ಹೆಚ್‌ಸಿ-574 ಬಿ. ಹರಿಮೂರ್ತಿ ರವರಿಗೆ ಜ್ಞಾಪನ ನೀಡಿದ್ದು, ಸದರಿಯವರು ವರದಿಯನ್ನು ಸಲ್ಲಿಕೊಂಡಿದ್ದು, ಆರೋಪಿತರು ತಲೆಮರೆಸಿಕೊಂಡಿರುವುದಾಗಿ ನಮೂದಿಸಿರುತ್ತಾರೆ.

ದಿನಾಂಕ:29.09.2021 ರಂದು ಫಿರ್ಯಾದಿ, ನೊಂದ ಸಾಕ್ಷಿ ಮತ್ತು ಆರೋಪಿತರ ಜಾತಿ ಪರಿಶೀಲನಾ ಪತ್ರವನ್ನು ನೀಡುವಂತೆ ಮಾನ್ಯ ತಾಲ್ಲೂಕು ದಂಡಾಧಿಕಾರಿಗಳು ಹಾಗೂ ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು ರವರಿಗೆ ಮನವಿ ಸಲ್ಲಿಸಲಾಯಿತು. ದಿನಾಂಕ;12.11.2021 ರಂದು ಮಾನ್ಯ ತಾಲ್ಲೂಕು ದಂಡಾಧಿಕಾರಿಗಳು ಹಾಗೂ ತಹಶೀಲ್ದಾರ್, ಬಳ್ಳಾರಿ ತಾಲ್ಲೂಕು ರವರು ಜಾತಿ ಪ್ರಮಾಣ ಪತ್ರವನ್ನು ನೀಡಿದ್ದು, ಸ್ವೀಕರಿಸಲಾಯಿತು. **ಅದನ್ನು** ಪರಿಶೀಲಿಸಲಾಗಿ **ಸಿಡಬ್ಲ್ಯೂ-15 ಶ್ರೀ ರೆಹಾನ್ ಪಾಷಾ ರವರು** ಫಿರ್ಯಾದಿ ಅನಿಲ್‌ಕುಮಾರ್- ವಾಲ್ಮೀಕಿ ಜನಾಂಗ ಸಾಕ್ಷಿ ಮಾರಣ್ಣ ಮತ್ತು ಶಶಿಕುಮಾರ್- ವಾಲ್ಮೀಕಿ ಜನಾಂಗ ಸಾಕ್ಷಿ ಕೌಶಿಕ್- ಲಿಂಗಾಯಿತ, ಆರೋಪಿ-1 ಅಬ್ದುಲ್ @ ಅಪ್ಪಿ ಮತ್ತು ಆರೋಪಿ-2 ಗಜನಿ ಮಹಮದ್ -ಮುಸ್ಲಿಂ, ಆರೋಪಿ ಚಿದಾನಂದ ಮತ್ತು ಗುಡುದುರು- ನಾಯಕ ಜನಾಂಗ ಎಂದು ಕಂಡು ಬಂದಿತ್ತು. ಸದರಿ ಮನವಿ ಪತ್ರವನ್ನು ನಿಪಿ-29 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಜಾತಿ ಪ್ರಮಾಣ

**ಪತ್ರವನ್ನು ನಿಪಿ-೩೦ ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-೩೦(ಎ) ಎಂದು ಗುರುತಿಸಲಾಯಿತು.**

ದಿನಾಂಕ:29.09.2021 ರಂದು ಕೃತ್ಯ ನಡೆದ ಸ್ಥಳದ ಉತಾರೆಯನ್ನು ನೀಡುವಂತೆ ಮಾನ್ಯ ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ ರವರಿಗೆ ಮನವಿ ಸಲ್ಲಿಸಲಾಯಿತು. ದಿನಾಂಕ;27.10.2021 ರಂದು ಸಿಡಬ್ಲ್ಯೂ-16 ಶ್ರೀ ಉದಯ್ ಸಿಂಗ್, ಉಪ ಆಯುಕ್ತರು(ಕಂದಾಯ), ಬಳ್ಳಾರಿ ಮಹಾನಗರ ಪಾಲಿಕೆ ರವರು ಕೃತ್ಯ ನಡೆದ ಸ್ಥಳದ ಬಗ್ಗೆ ಪಾಲಿಕೆಯಲ್ಲಿ ಖಾತೆ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ. **ಮನವಿ ಪತ್ರವನ್ನು ನಿಪಿ-೩೧ ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-೩೧(ಎ) ಎಂದು ಗುರುತಿಸಲಾಯಿತು. ಚಾಸಾ ೧೬ ರವರು ನೀಡಿದ ವರದಿಯನ್ನು ನಿಪಿ-೩೨ ಎಂದು ಹಾಗೂ ಸಾಕಿೆಯ ಸಹಿಯನ್ನು ನಿಪಿ-೩೨(ಎ) ಎಂದು ಗುರುತಿಸಲಾಯಿತು.**

ದಿನಾಂಕ:29.09.2021 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೋಟೆ, ಬಳ್ಳಾರಿ ರವರಿಗೆ ಮನವಿ ಸಲ್ಲಿಸಿದ್ದರ ಮೇರೆಗೆ ದಿನಾಂಕ:14.10.2021 ರಂದು **ಸಿಡಬ್ಲ್ಯೂ-17** ಶ್ರೀ ಹೊನ್ನೂರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನೀಡಿದ್ದು, ಸ್ವೀಕರಿಸಿ ಪರಿಶೀಲಿಸಿ **ಅದನ್ನು** ತನಿಖಾ ಕಡತದಲ್ಲಿ ಅಳವಡಿಸಿಕೊಳ್ಳಾಯಿತು. **ಮನವಿ ಪತ್ರವನ್ನು ನಿಪಿ-೩೩ ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-೩೩(ಎ) ಎಂದು ಗುರುತಿಸಲಾಯಿತು. ಚಾಸಾ ೧೭ ರವರು ನೀಡಿದ ವರದಿ ಮತ್ತು ನಕಾಶೆಯನ್ನು ಈಗಾಗಲೇ ನಿಪಿ-೧೭ ಮತ್ತು ೧೬ ಎಧು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ವರದಿಯಲ್ಲಿ ನಿಪಿ-೧೭(ಎ) ಎಂದು ಗುರುತಿಸಲಾಯಿತು.**

ದಿನಾಂಕ:29.09.2021 ರಂದು ಫಿರ್ಯಾದಿ ಅನಿಲ್ ಕುಮಾರ್ ಮತ್ತು ನೊಂದ ಸಾಕ್ಷಿದಾರ ಮಾರಣ್ಣ ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ವೈದ್ಯಕೀಯ ಅಧೀಕ್ಷಕರು, ವಿಮ್ಸ್ ಆಸ್ಪತ್ರೆ, ಬಳ್ಳಾರಿ ರವರಿಗೆ ಮನವಿ ಪತ್ರ ಸಲ್ಲಿಸಿದ್ದರ ಮೇರೆಗೆ ದಿನಾಂಕ;26.10.2021 ರಂದು **ಪಿರ್ಯಾದಿ** ಅನಿಲ್ ಮತ್ತು ಮಾರಣ್ಣ ರವರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು **ಅದನ್ನು** ಸ್ವೀಕರಿಸಲಾಯಿತು **ಮತ್ತು ಅದನ್ನು** ಪರಿಶೀಲಿಸಿ ತನಿಖಾ ಕಡತದಲ್ಲಿ **ಅಳವಡಿಸಿಕೊಳ್ಳಲಾಯಿತು . ಸದರಿ ಮನವಿ ಪತ್ರವನ್ನು ನಿಪಿ-೩೪ ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-೩೪(ಎ) ಎಂದು ಗುರುತಿಸಲಾಯಿತು.ಗಾಯಾಳುಗಳ ಗಾಯ ಪ್ರಮಾಣ ಪತ್ರಗಳನ್ನು ಈಗಾಗಲೇ ನಿಪಿ-೧೧ ಮತ್ತು ೧೨ ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಗಳನ್ನು ನಿಪಿ-೧೧(ಬಿ) ಮತ್ತು ನಿಪಿ-೧೨(ಬಿ) ಎಂದು ಗುರುತಿಸಲಾಯಿತು.**

ದಿನಾಂಕ:02.11.2021 ರಂದು ಜಪ್ತುಪಡಿಸಿದ ಕಟ್ಟಿಗೆಗಳನ್ನು ಪರಿಶೀಲಿಸಿ ಗಾಯಾಳು ಅನಿಲ್ ಕುಮಾರ್ ಮತ್ತು ಮಾರಣ್ಣ ರವರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳ ಬಗ್ಗೆ ಅಭಿಪ್ರಾಯ ವರದಿ ನೀಡುವಂತೆ ಡಾ. ರಾಕೇಶ್ ಎಂ., ವೈದ್ಯಾಧಿಕಾರಿಗಳು, ವಿಮ್ಸ್ ಆಸ್ಪತ್ರೆ, ಬಳ್ಳಾರಿ ರವರಿಗೆ ಮನವಿ ಸಲ್ಲಿಸಿದ್ದರ ಮೇರೆಗೆ ದಿನಾಂಕ:11.11.2021 ರಂದು **ಸಿಡಬ್ಲ್ಯೂ-18 ಡಾ. ರಾಕೇಶ್ ಎಂ., ವೈದ್ಯಾಧಿಕಾರಿಗಳು,** ವಿಮ್ಸ್ ಆಸ್ಪತ್ರೆ, ಬಳ್ಳಾರಿ ರವರು ನೀಡಿದ Certificate of Examination ನ್ನು ಹೆಚ್‌ಸಿ-343 ತಂದು ಹಾಜರುಪಡಿಸಿದ್ದು, ಸ್ವೀಕರಿಸಿ

ಪರಿಶೀಲಿಸಲಾಗಿ ಸದರಿಯವರು The injury sustained by Mr. Anilkumar and Marenna the injury mentioned in wound certificate given as numbered 1234/1235 2021-22 with dated:25.10.2021 can be caused by such weapon described above ಎಂದು ನಮೂದಿಸಿರುತ್ತಾರೆ. ಆಸ್ಪತ್ರೆಯಿಂದ Certificate of Examination ನ್ನು ಸ್ವೀಕರಿಸಿ ತಂದು ಹಾಜರುಪಡಿಸಿದ ಹೆಚ್‌ಸಿ-343 ಕೆ.ಆರ್. ಶ್ರೀನಿವಾಸ ರಾವ್ ರವರ ಹೇಳಿಕೆಯನ್ನು ದಾಖಲು ಮಾಡಲಾಯಿತು. **ಸದರಿ ಮನವಿ ಪತ್ರವನ್ನು ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-13 (ಬಿ) ಎಂದು ಗುರುತಿಸಲಾಯಿತು. ಅಂತಿಮ ಅಭಿಪ್ರಾಯವನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಗಿದೆ. ಸಾಕ್ಷಿಯ ಸಹಿಯನ್ನುನಿಪಿ-14(ಬಿ) ಎಂದು ಗುರುತಿಸಲಾಯಿತು.**

ದಿನಾಂಕ:13.11.2021 ರಂದು ಎ-4 ಗುಡದರ್ ವೀರೇಶ್ ರವರನ್ನು ಪತ್ತೆಮಾಡಿ ಕರೆತಂದು ಹಾಜರುಪಡಿಸುವಂತೆ ಹೆಚ್‌ಸಿ-28 ಸಿದ್ದಪ್ಪ ಮತ್ತು ಪಿಸಿ-65 ಮಾರುತಿ ರವರಿಗೆ ಜ್ಞಾಪನ ನೀಡಿದ್ದು, ಸದರಿಯವರು ಆರೋಪಿ-4 ಗುಡುದೂರು ವೀರೇಶ ರವರನ್ನು ಬೆಳಗ್ಗೆ 10-30 ಗಂಟೆಗೆ ಸಿದ್ಧಾರ್ಥ ಕಾಲೋನಿ, ಪೀರಲದೇವರ ಗುಡು ಹತ್ತಿರ ವಶಕ್ಕೆ ಪಡೆದು 11-00 ಗಂಟೆಗೆ ಕರೆತಂದು ಹಾಜರುಪಡಿಸಿದರು. 4 **ನೇ** ಆರೋಪಿತನನ್ನು ವಿಚಾರಣೆ ಮಾಡಿ ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು.

ದಿನಾಂಕ;13.11.2021 ರಂದು ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯಿಂದ **ಸಿಡಬ್ಲ್ಯೂ-19 ಶ್ರೀ ಇ. ನಾಗರಾಜ, ಸಹಾಯಕ ಅಭಿಯಂತರು(ವಿ), ಕಾ ಮತ್ತು ಪಾ ಘಟಕ-5 ರವರು** ಕೃತ್ಯ ನಡೆದ ಸ್ಥಳ ಕೆಹೆಚ್‌ಬಿ ಕಾಲೋನಿಯ ಬನ್ನಿಕಟ್ಟೆ ಪಾರ್ಕ್ ಏರಿಯಾದಲ್ಲಿ ವಿದ್ಯುತ್ ಸಂಪರ್ಕ ಇದ್ದ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಸ್ವೀಕರಿಸಿ ಕಡತದಲ್ಲಿ ಅಳವಡಿಕೊಳ್ಳಲಾಯಿತು. **ಸದರಿ ವರದಿಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.**

ದಿನಾಂಕ:13.11.2021 ರಂದು ಆರೋಪಿತರ ವಿರುದ್ಧ ಆರೋಪ ದೃಢಪಟ್ಟ ಮೇರೆಗೆ ಆರೋಪಿ-1 ರಿಂದ 4 ರವರ ವಿರುದ್ಧ ಕಲಂ 323, 324, 307, 504 ಸಹವಾಚಕ 34 ಭಾದಂಸಂ ಮತ್ತು 3(1)(ಆರ್), 3(1)(ಎಸ್), 3(2)(v-a) ಎಸ್‌ಸಿ/ಎಸ್‌ಟಿ ಕಾಯಿದೆ ರೀತ್ಯಾ ದೋಷಾರೋಪಣ ಪತ್ರವನ್ನು ತಯಾರು ಮಾಡಿ ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿ-5 ಮತ್ತು 6 ರವರ ವಿರುದ್ಧ ಆರೋಪ ಸಾಬೀತಾಗದ ಕಾರಣ ದೋಷಾರೋಪಣೆಯಿಂದ ಕೈಬಿಡಲಾಗಿದೆ ಮತ್ತು ಆರೋಪಿ- 3 ತಲೆಮರೆಸಿಕೊಂಡಿರುತ್ತಾನೆ ಎಂದು **ದೋಷಾರೋಪಣೆ ಪಟ್ಟಿಯಲ್ಲಿ ನಮೂದು ಮಾಡಲಾಗಿದೆ. ಸಾಕ್ಷಿಯು ಆರೋಪಿ 1 ಮತ್ತು 4 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 2 ಗೈರ ಹಾಜರು ಇದ್ದು ಆತನ ಗುರುತಿನ ತಕರಾರು ಇಲ್ಲ ಅವರ ಪರ ವಕೀಲರು ತಿಳಿಸಿರುತ್ತಾರೆ.**

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ ಪಿ ಆರ್ ಬಿ ವಕೀಲರಿಂದಃ**

ಘಟನೆಯಾಗಿದೆ ಎಂದು ಹೇಳುತ್ತಿರುವ ಸ್ಥಳ ಬಳ್ಳಾರಿ ಕೆ ಹೆಚ್ ಬಿ ಕಾಲೋನಿಯ ಬನ್ನಿಕಟ್ಟೆ ಪಾರ್ಕ್ ಬಳಿ ಇದೆ ಎಂದರೆ ಸರಿ. ಬನ್ನಿಕಟ್ಟೆ ಪಾರ್ಕ್ ನ ಅಕ್ಕ ಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಎಲ್ ಐ ಜಿ 210 ಮನೆಯ ಹತ್ತಿರ ಬನ್ನಿಕಟ್ಟೆ ಪಾರ್ಕ್ ಬರುತ್ತದೆ ಎಂದರೆ ಸಾಕ್ಷಿಯ ಇರಬಹುದು ಎಂದು ಉತ್ತರಿಸಿರುತ್ತಾರೆ. ಚಾಸಾ 2 ಮತ್ತು 3 ರವರ ವಿಳಾಸ ಮೇಲ್ನೋಟಕ್ಕೆ ಡಿ ಎ ಆರ್ ಪೋಲೀಸ್ ವಸತಿ ಗೃಹ ಹಾಗೂ ಸಿದ್ದಾರ್ಥ ಕಾಲೋನಿ ಎಂದು ಕಂಡು ಬರುತ್ತದೆ ಎಂದರೆ ಸರಿ. ಬನ್ನಿಕಟ್ಟೆ ಪಾರ್ಕ್ ನಿಂದ ಡಿ ಎ ಆರ್ ವಸತಿ ಗೃಹಗಳು ಸುಮಾರು 3 ಕಿ. ಮೀ ದೂರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಒಳ ರಸ್ತೆಯಿಂದ ಸುಮಾರು 1 ಕಿ. ಮೀ.ದೂರ ಇದೆ ಎಂದು ಹೇಳಿರುತ್ತಾರೆ. ಸಿದ್ದಾರ್ಥ ಕಾಲೋನಿ 1 ಕಿ. ಮೀ. ದೂರ ಇದೆ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ಚಾಸಾ 1 ರವರ ಅನುಕೂಲಕ್ಕಾಗಿ ಅವರು ಹೇಳಿದಂತಹ ವ್ಯಕ್ತಿಗಳನ್ನು ನಾನು ಪಂಚರಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಬನ್ನಿಕಟ್ಟೆ ಪಾರ್ಕ್‌ನ ಸುತ್ತಮುತ್ತ ಇರುವ ವಾಸದ ಮನೆಗಳ ನಿವಾಸಿಗಳನ್ನು ನಾನು ಸಾಕ್ಷಿದಾರರಾಗಿ ತೋರಿಸಿಲ್ಲ ಮತ್ತು ಅವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 8 ರಿಂದ 12 ರವರ ವಾಸದ ಮನೆಗಳು ಬನ್ನಿಕಟ್ಟೆ ಪಾರ್ಕ್‌ನ ಹತ್ತಿರ ಇಲ್ಲ ಎಂದರೆ ಸರಿಯಲ್ಲ.

ಚಾಸಾ 4 ಮತ್ತು 5 ರವರು ಮುನ್ಸಿಪಾಲಿಟಿಯಲ್ಲಿ ಕರ್ತವ್ಯ ಮಾಡುತ್ತಾರೆ ಎಂದರೆ ಸರಿ. ಅವರುಗಳು ಪಂಚನಾಮೆಯ ದಿವಸ ಕರ್ತವ್ಯಕ್ಕೆ ಹಾಜರಾಗಿದ್ದ ಬಗ್ಗೆ ನಾನು ಹಾಜರಾತಿ ಪುಸ್ತಕದ ಎಕ್ಸ್‌ಟ್ರಾಕ್ಟ್ ಪಡೆದಿಲ್ಲ ಮತ್ತು ಹಾಜರು ಪಡಿಸಿಲ್ಲ. ಚಾಸಾ 4 ಮತ್ತು 5 ರವರ ಮೂಮೆಂಟ್ ರಿಜಿಸ್ಟರ್ ನ್ನು ಪಡೆದು ಹಾಜರು ಪಡಿಸಿಲ್ಲ. ನಿಪಿ-27 ರಲ್ಲಿ ಅದನ್ನು ಪಡೆದ ಸಮಯ ನಮೂದಿಸಿಲ್ಲ ಎಂದರೆ ಸರಿ. ನಾನು ಸದರಿ ಮನವಿ ಪತ್ರವನ್ನು ನೀಡಿದ ಸಮಯ ನಮೂದಿಸಿಲ್ಲ ಎಂದರೆ ಸರಿ. ನಾನು ಎಲ್ಲಾ ಸಾಕ್ಷಿದಾರರುಗಳ ಹೇಳಿಕೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸಾಕ್ಷಿದಾರರುಗಳು ನನ್ನ ಮುಂದೆ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಟಾಟಾ ಎ ಸಿ ವಾಹನವನ್ನು ಈ ಪ್ರಕರಣಕ್ಕೆ ಅನುಕೂಲವಾಗಲೀ

ಎಂದು ನಾನು 1 ನೇ ಆರೋಪಿಯನ್ನು ಬೆದರಿಸಿ ಠಾಣೆಗೆ ತರಿಸಿಕೊಂಡಿದ್ದೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಕಾನೂನು ಪ್ರಕಾರ ವಾಹನ ಹಾಜರುಪಡಿಸುವಂತೆ ನೋಟೀಸ್ ಕೊಟ್ಟಿಲ್ಲ ಎಂದರೆ ಸಾಕ್ಷಿಯು 1 ನೇ ಆರೋಪಿಯೇ ಸ್ವ ಇಚ್ಛೆಯಿಂದ ವಾಹನ ಹಾಜರುಪಡಿಸಿದ್ದ ಎಂದು ಹೇಳಿರುತ್ತಾರೆ. ಟಾಟಾ ಎಸಿ ವಾಹನದ ಮಾಲೀಕರ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸಿಗೆ ಅನುಕೂಲವಾಗುವಂತೆ ನಿಪಿ-11 ಮತ್ತು 12 ರಂತೆ ಗಾಯ ಪ್ರಮಾಣ ಪತ್ರಗಳನ್ನು ವೈದ್ಯಾಧಿಕಾರಿಗಳಿಗೆ ಹೇಳಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಎಲ್ಲಾ ದಾಖಲಾತಿಗಳನ್ನು ಸುಳ್ಳು ಸೃಷ್ಟಿ ಮಾಡಿ ಪಡೆದುಕೊಡಿಂದ್ದೇನೆ ಎಂದರೆ ಸರಿಯಲ್ಲ. ತನಿಖೆ ಸಮಯದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ನಾನು ಆರೋತಪಿರ ವಿರುದ್ದ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರನ್ನು ಮಾಡಿಲ್ಲ ಮತ್ತು ಮು ವಾ 1 ಮತುತ 2 ನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಮತುತ ಮುದ್ದೆ ಮಾಲುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಫೋಟೋಗಳನ್ನು ಮತ್ತು ಸಿಡಿಗಳನ್ನು ಸಹ ಸುಳ್ಳು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ 3 ಮತ್ತು 4 ಪರ ವಕೀಲರು ಸಾಕ್ಷಿಯ ಮೇಲಿನ ಪಾಟೀ ಸವಾಲನ್ನು ಅವಲಂಬಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**